ನಂತರ ಅವ್ವ ಋತುಮತಿಯಾದಳು.

ಅವ್ವ ಋತುಮತಿಯಾದ ನಂತರ ಅಪ್ಪ ಅವ್ವನ 'ಗಂಡ ಹೆಂಡತಿ' ಸಂಬಂಧ ಮರು ಹುಟ್ಟು ಪಡೆಯಿತು. ಅವ್ವನಿಗೆ ಬೆಳಗ್ಗೆ ಎದ್ದ ಕೂಡಲೇ ಕೊಟ್ಟಿಗೆ ಕಸ ಸುರಿದು ಅಡುಗೆ ಮಾಡಿ ಹೊಲಕ್ಕೆ ಹೋಗುವ ಧಾವಂತ. ಅಪ್ಪನೊಡನೆ ಜಮೀನಿನಲ್ಲಿ ದುಡಿಯುವುದೇ ಏಕಾಂತಕ್ಕೆ ಸಿಕ್ಕ ಅವಕಾಶ. ಇಲ್ಲಿಂದಲೇ ಅವ್ವ ಅಪ್ಪನೊಡನೆ ಸಹಜೀವಿಯಾಗಿದ್ದು. ಅಪ್ಪನ ಬಣ್ಣ ಕಪ್ಪು. ಅವ್ವ ಗೋಧಿ ಮೈಬಣ್ಣದವಳು. ಅವ್ವ ಹಡೆದ ಆರು ಮಕ್ಕಳಲ್ಲಿ ನನ್ನ ತಂಗಿ ಮಾತ್ರ ಅಪ್ಪನ ಪಡಿಯಚ್ಚು. ಅವ್ವನ ಗೋಧಿ ಮೈಬಣ್ಣ ಉಳಿದ ನಮಗೆಲ್ಲ ಬಳುವಳಿ.

ಒಂಟಿಯಾಗಿರುತ್ತಿದ್ದ ಅಪ್ಪ ಅವ್ವ ಜೋಡಿ ಹಕ್ಕಿಗಳಾಗಿದ್ದು, ಕುಟುಂಬದ ಕೆಂಗಣ್ಣಿಗೆ ಗುರಿಯಾಯಿತು. ಕ್ಷುಲ್ಲಕ ಕಾರಣಕ್ಕೆ ಊಟದಲ್ಲಿ ವಿಷ ಬೆರೆಸಿ, ಅಪ್ಪ ಅವ್ವ ಇಬ್ಬರನ್ನೂ ಮುಗಿಸುವ ಹುನ್ನಾರ ಮಾಡಿದರು. ನನ್ನ ಅಪ್ಪನಿಗೆ ಹಾವು ಕಡಿತ ಮತ್ತು ಉಳುಕಿದ್ದಕ್ಕೆ ಮಂತ್ರ ಹಾಕುವ ವಿದ್ಯೆ ಗೊತ್ತಿದೆ. ಹಾವು ಕಚ್ಚಿದ ಬಗ್ಗೆ ಕರೆ ಬಂದರೆ ಊಟ, ನಿದ್ರೆ ಏನಿದ್ದರೂ ಬಿಟ್ಟು ಮಂತ್ರ ಹಾಕಲು ಹೋಗುತ್ತಿದ್ದ. ಅಂದು ಯಾರಿಗೋ ಹಾವು ಕಚ್ಚಿದ ಸುದ್ದಿ ಬಂದಿದ್ದರಿಂದ ಅಪ್ಪ ಊಟ ಮಾಡದೆ ಹೊರಟುಹೋದ. ಇದರಿಂದಾಗಿ ಅಂದು ಅಪ್ಪನ ಜೀವ ಉಳಿಯಿತು. ಗಂಡನ ಊಟದ ನಂತರವೇ ಹೆಂಡತಿಯು ಊಟ ಮಾಡುತ್ತಿದ್ದುದರಿಂದ ಅಂದು ಊಟ ಮಾಡದ ಕಾರಣ ಅವ್ವ ಕೂಡ ಬಚಾವಾದಳು.

ಆದರೆ, ಶಾಲೆಯಿಂದ ಬಂದ ಅಪ್ಪನ ಕೊನೆಯ ತಮ್ಮ ಮತ್ತು ತಂಗಿ ತಟ್ಟೆಯಲ್ಲಿದ್ದ ಅನ್ನ ತಿಂದರು. ವಾಂತಿ ಮಾಡಿಕೊಂಡರು. ಈಗಿನಂತೆ ಹತ್ತಿರದಲ್ಲಿ ಆಸ್ಪತ್ರೆ ಸೌಲಭ್ಯ ಇರಲಿಲ್ಲ. ಹೊರಳಾಡಿ ಸತ್ತರು. ಅಡುಗೆ ಮಾಡಿದ್ದ ಅವ್ವನ ಮೇಲೆ 'ನೀನೇ ವಿಷ ಹಾಕಿ ಕೊಂದಿದ್ದೀಯಾ?' ಎಂಬ ಆಪಾದನೆ ಬಂತು. ಮೃತ ದೇಹಗಳ ಪಕ್ಕ ಅವ್ವನ ಕಾಲು ಕೈ ಕಟ್ಟಿ ಪಂಚಾಯ್ತಿ ಮಾಡಿದರು. ಎರಡು ನಿರ್ಜೀವ ದೇಹಗಳ ಪಕ್ಕ ಸಜೀವಿಯಾಗಿ ಬಿದ್ದಿದ್ದ ಅವ್ವನ ಸ್ಥಿತಿಗೆ ಮರುಗಿದ ಗ್ರಾಮದ ಗುಂಡಮ್ಮ, ಇದೇ ಕುಟುಂಬದ ಸದಸ್ಯರೊಬ್ಬರು ತನ್ನಿಂದ ವಿಷ ಪಡೆದಿದ್ದನ್ನು ಪಂಚಾಯ್ತಿ ಎದುರು ಬಹಿರಂಗಪಡಿಸಿದಳು. ಕ್ಷಣಾರ್ಧದಲ್ಲಿ ತಾತ ಮತ್ತು ಕುಟುಂಬಸ್ಥರು ಸ್ಥಳದಿಂದ ಕಾಲ್ಕಿತ್ತರು. ಅಂದೇ ಅವ್ವ ಅಪ್ಪ ಕುಟುಂಬದಿಂದ ಪ್ರತ್ಯೇಕ ಸಂಸಾರ ಹೂಡಲು ನಿರ್ಧರಿಸಿದರು. ಒಂದು ವಾರ ಪಕ್ಕದ ಮನೆಯ ಜಗಲಿಯಲ್ಲಿ ವಾಸ. ನಂತರ ಗೋಡೆಯಾಗಿ ಸುತ್ತ ತೆಂಗಿನ ಗರಿ ಮತ್ತು ಮೇಲೆ ವಡಕೆಯಿಂದ ತಯಾರಾದ ಗುಡಿಸಲಿಗೆ ಸ್ಥಳಾಂತರ.

ಅಪ್ಪನ ಸಾಂಗತ್ಯ ಅವ್ವನಿಗೆ ಹಿತವೆನಿಸಿತು. ಅಪ್ಪ ಬಟ್ಟಿ ಸಾರಾಯಿ ಕುಡಿಯುವುದನ್ನು ಕಡಿಮೆ ಮಾಡಿದ. ಆದರೆ,` ಮನೆಯಲ್ಲಿ ಬಾಡು ಬೇಯಿಸಿದ ದಿನ ಹೆಂಡ, ಸಾರಾಯಿ ಸೇವನೆ ತಪ್ಪಿದ್ದಲ್ಲ. ವಯಸ್ಸಾಗಿದೆ ಎಂಬ ಕಾರಣದಿಂದ ಈಗಲೂ ಪ್ರತಿ ದಿನ ಅಣ್ಣ ತಂದಿಟ್ಟ ಬಾಟಲಿನಿಂದ ಒಂದು ಪೆಗ್ಗು ಬೇಕು. ಹಲವು ಬಾರಿ ಕುಡಿದು ವಾಂತಿ ಮಾಡಿದ್ದು ಉಂಟು. ಗಲೀಜು ಮಾಡಿಕೊಂಡ ಬಟ್ಟೆ, ದೇಹ ಮತ್ತು ಮನೆ ಸ್ವಚ್ಛ ಮಾಡುವುದು ಹೆಚ್ಚಿನ ಚಾಕರಿ ಅವ್ವನಿಗೆ. ಆದರೆ ಮುಂಗೋಪವು ಸ್ವಲ್ಪವು ಕಡಿಮೆಯಾಗಲಿಲ್ಲ. ಅಪ್ಪ ಎಂತಹ ಕಷ್ಟವಿದ್ದರೂ ಸಂಜೆ ಏಳು ಗಂಟೆಗೆ ಮಲಗಬೇಕು. ಈ ಅಭ್ಯಾಸ ಈಗಲೂ ಮುಂದುವರೆದಿದೆ. ಮಲಗಿದ ನಂತರ ಮನೆಯಲ್ಲಿ ಯಾರೂ ಹೆಚ್ಚು ಮಾತನಾಡಿ ನಿದ್ರಾಭಂಗ ಮಾಡಿದರೆ ಈ ದೂರ್ವಾಸ ಮುನಿಯ ಸಿಟ್ಟಿಗೆ ಗುರಿಯಾಗಬೇಕಿತ್ತು.

ಮದುವೆಗೆ ಮುಂಚೆ ಅಪ್ಪ, ಬೇರೆಯವರ ಜಮೀನಿನಲ್ಲಿ ಕೂಲಿ ಮಾಡುತ್ತಿದ್ದ, ಕಬ್ಬು ಕಡಿಯಲು ಹೋಗುತ್ತಿದ್ದ. ಮದುವೆಯಾದ ನಂತರ ಅಪ್ಪನನ್ನು ಅವ್ವ ಎಂದೂ ಕೂಲಿಗೆ ಕಳುಹಿಸಲಿಲ್ಲ. ಅಪ್ಪನೆಂದರೆ ಅವ್ವನಿಗೆ ತನ್ನ ಗಂಡ ಮಾತ್ರ ಅಲ್ಲ. ತನ್ನ ಜೀವದ ಮತ್ತು ಮನೆತನದ ಯಜಮಾನ. ಬಡತನವಿದ್ದರೂ ತನ್ನ ಗಂಡ ಮತ್ತೊಬ್ಬರ ಮುಂದೆ ಬಗ್ಗಿ ನಿಲ್ಲಕೂಡದೆಂಬ ಸ್ವಾಭಿಮಾನ. ಅವ್ವನ ಲೋಕಜ್ಞಾನ ಅಪರಿಮಿತ. ತಾನು ಕೂಲಿ ಮಾಡುವುದರ ಜೊತೆಗೆ ನನ್ನಣ್ಣ ಮತ್ತು ನನ್ನನ್ನು ಮಾತ್ರ ಕೂಲಿಗೆ ಕಳುಹಿಸಿದಳು. ಮನೆಯ ಆರ್ಥಿಕ ಸ್ಥಿತಿ ಸ್ವಲ್ಪ ಮಟ್ಟಿಗೆ ಚೇತರಿಸಿದ್ದರಿಂದ ತಮ್ಮ ಕೂಲಿ ಮಾಡಲಿಲ್ಲ. ಆದರೆ, ಅಪ್ಪ–ಅಕ್ಕ ಮತ್ತು ತಂಗಿಯನ್ನು ಕೂಲಿಗೆ ಕಳುಹಿಸಲಿಲ್ಲ. ಅವರೆಲ್ಲರ ಭಾರವನ್ನು ಅವ್ವ ಒಬ್ಬಳೇ ಹೊತ್ತಳು. ಅಕ್ಕ ಸ್ವಲ್ಪ ದಿನ ಎಮ್ಮೆ ಮೇಯಿಸಿದ್ದನ್ನು ಬಿಟ್ಟರೆ ಮನೆಯಲ್ಲಿಯೇ